Phone No.: 0831-2565203,206,234

# ರಾಣಿ ಚನ್ನಮ್ಮ ವಿಶ್ವವಿದ್ಯಾಲಯ

ವಿದ್ಯಾಸಂಗಮ, ರಾಷ್ಟ್ರೀಯ ಹೆದ್ದಾರಿ –04, ಭೂತರಾಮನಹಟ್ಟಿ, ಬೆಳಗಾವಿ – 591156

# RANI CHANNAMMA UNIVERSITY,

**Vidya Sangama, National Highway – 04, Belagavi – 591156**

E-mail: rcuregistrar@gmail.com Website: www.rcub.ac.in

**ಕುಲಸಚಿವರ ಕಾರ್ಯಾಲಯ**

**Ref No.:** ರಾಚವಿವಿ/ಬೆಳಗಾವಿ/ಕುಸಕಾ/ವಿ.ಮಂ.ವಿ/ಪಿಎಚ್.ಡಿ/2018-19/2392 **Date: 31 July, 2018**

## ಪಿಎಚ್.ಡಿ. ಪ್ರವೇಶಾತಿ ಅಧಿಸೂಚನೆ 2018–19

ವಿಷಯ: ಪಿಎಚ್.ಡಿ ಪದವಿಗೆ 2018–19 ನೇ ಸಾಲಿನ ಪ್ರವೇಶಾತಿಗಾಗಿ ಅಧಿಸೂಚನೆ
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 24–07–2018

ಪಿಎಚ್.ಡಿ ಪದವಿಗೆ (ಪೂರ್ಣಕಾಲಿಕ ಮತ್ತು ಅರೆಕಾಲಿಕ)2018–19ನೇ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯದ ವಿವಿಧ ವಿಷಯಗಳಲ್ಲಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿ ಕರೆಯಲಾಗಿದೆ.

ಪಿಎಚ್.ಡಿ ಪದವಿಗಾಗಿ ಲಭ್ಯವಿರುವ ವಿಷಯಗಳು: ಕನ್ನಡ, ಇಂಗ್ಲೀಷ್, ಮರಾಠಿ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ, ವಾಣಿಜ್ಯಶಾಸ್ತ್ರ, ಶಿಕ್ಷಣಶಾಸ್ತ್ರ, ಅಪರಾಧಶಾಸ್ತ್ರ ಮತ್ತು ಅಪರಾಧಿಕ ನ್ಯಾಯ, ಗಣಕ ವಿಜ್ಞಾನ, ಭೌತಶಾಸ್ತ್ರ, ರಾಸಾಯನಶಾಸ್ತ್ರ, ಭೂಗೋಳಶಾಸ್ತ್ರ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಿತಶಾಸ್ತ್ರ, ಆಡಳಿತ ವ್ಯವಹಾರ ನಿರ್ವಹಣೆ.

ಅಭ್ಯರ್ಥಿಯು ನಿಗದಿತ ನಮೂನೆಯ ಅರ್ಜಿಯನ್ನು ವಿಶ್ವವಿದ್ಯಾಲನಿಲಯದ ಜಾಲತಾಣದಲ್ಲಿ www.rcub.ac.in ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ ಸಂಯೋಜಕರು ಇವರಿಗೆ ನೇರವಾಗಿ ಸಲ್ಲಿಸತಕ್ಕದ್ದು. ಅರ್ಜಿ ಶುಲ್ಕ ರೂ. 720/– ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗಾಗಿ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ. 360/– ಗಳು. **ಶುಲ್ಕದ ಡಿ.ಡಿ. ಯನ್ನು ಹಣಕಾಸು ಅಧಿಕಾರಿಗಳು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ** ಇವರ ಹೆಸರಿಗೆ ತೆಗೆದು ಅದರ ಮೂಲ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕದೊಂದಿಗೆ, ದಂಡ ಶುಲ್ಕ ಸಹಿತ ರೂ.600/–ಗಳನ್ನು ದಿನಾಂಕ: 31–08–2018ರ ಒಳಗಾಗಿ ಸಲ್ಲಿಸತಕ್ಕದ್ದು.

| ವಿವರ | ದಿನಾಂಕ |
|---|---|
| ಅರ್ಜಿ ಲಭ್ಯವಿರುವ ದಿನಾಂಕ | 01–08–2018 |
| ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ | 25–08–2018 |
| ದಂಡ ಸಹಿತ ಕೊನೆಯ ದಿನಾಂಕ | 31–08–2018 |

ಅಪೂರ್ಣ ಅರ್ಜಿಗಳು ಮತ್ತು ಸಂಬಂಧಪಟ್ಟ ದಾಖಲೆಗಳು ಇಲ್ಲದಿರುವ ಅರ್ಜಿಯನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರನ್ನು ಸಂಪರ್ಕಿಸುವುದು.

1. ಅರ್ಹತೆ: ಅಭ್ಯರ್ಥಿಯು ಸ್ನಾತಕೋತ್ತರ ಪರೀಕ್ಷೆಯಲ್ಲಿ ಕನಿಷ್ಟ 55% ಅಂಕಗಳನ್ನು ಪಡೆದಿರಬೇಕು (50% ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1/ವಿಕಲಚೇತನ) ಅಥವಾ ತತ್ಸಮಾನ ಪದವಿಯಲ್ಲಿ ಅರ್ಹರಾಗಿರಬೇಕು.
2. ದಂಡ ಸಹಿತ ಕೊನೆಯ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

**ಸಹಿ/–**

**ಕುಲಸಚಿವರು**

**ಸಾಮಾನ್ಯ ಸೂಚನೆಗಳು:**

1. ಅರ್ಜಿಗಳನ್ನು ಸಾರ್ವತ್ರಿಕ ರಜೆ ಹಾಗೂ ಮೂರನೇ ಶನಿವಾರ ಮತ್ತು ಭಾನುವಾರಗಳಂದು ಹೊರತುಪಡಿಸಿ, ಎಲ್ಲಾ ದಿನಗಳಲ್ಲಿ ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೂ ಸ್ವೀಕರಿಸಲಾಗುವುದು.
2. ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
3. ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಬಂಧಿಸಿದ ಜಾತಿ /ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.
4. ಸರ್ಕಾರಿ ಸೇವೆಯಲ್ಲಿ ಇದ್ದಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರದ ಮುಖಾಂತರ ಸಲ್ಲಿಸಕ್ಕದ್ದು.
5. ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದಿಂದ ಖುದ್ದಾಗಿ ಪಡೆಯತಕ್ಕದ್ದು.
6. ಪೂರ್ಣಕಾಲಿಕ ಪಿಎಚ್.ಡಿ ಬಯಸುವ ಅಭ್ಯರ್ಥಿಗಳು ಪಿಎಚ್.ಡಿ ಅವಧಿಯಲ್ಲಿ ಯಾವುದೇ ಹುದ್ದೆಗೆ ಸೇರುವುದಿಲ್ಲವೆಂದು ಮುಚ್ಚಳಿಕೆ ಪತ್ರವನ್ನು ಸಲ್ಲಿಸತಕ್ಕದ್ದು.
7. ವಿಶ್ವವಿದ್ಯಾನಿಲಯವು ಸೀಟುಗಳನ್ನು ಭರ್ತಿ ಮಾಡುವ ಮತ್ತು ಮಾಡದೇ ಇರುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

**ಸೂಚನೆ:**

1. ಆಯ್ಕೆ ಪಟ್ಟಿಯನ್ನು ಘೋಷಿಸುವ ಸಂದರ್ಭದಲ್ಲಿ ಯಾವುದೇ ಅಭ್ಯರ್ಥಿಗೆ ಸಮಾನ ಅಂಕಗಳು ಬಂದ ಪಕ್ಷದಲ್ಲಿ ಸ್ನಾತಕ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು.
2. ವಿದೇಶಿ ಮತ್ತು ಪ್ರಾಯೋಜಿತ ಅಭ್ಯರ್ಥಿಗಳು, FIP/QIP ಅಡಿಯಲ್ಲಿನ ಉಪನ್ಯಾಸಕರು ಹಾಗೂ UGC-JRF/UGC-CSIR-JRF/NET/SLET/GATE/GRE ತೇರ್ಗಡೆಯಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಇರುತ್ತದೆ.
3. ಪ್ರವೇಶ ಪರೀಕ್ಷೆ ತೆಗೆದುಕೊಳ್ಳದ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಸಂದರ್ಶನದ ದಿನ, ಸಮಯ ಹಾಗೂ ಸ್ಥಳವನ್ನು ತಿಳಿಸಲಾಗುವುದು, ಇದನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಸಹ ಹಾಕಲಾಗುವುದು.
4. ಪ್ರವೇಶ ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಮಾತ್ರ ವಿಶ್ವವಿದ್ಯಾಲಯದ ಸಂಶೋಧನಾರ್ಥಿಯಾಗಿ ಪ್ರವೇಶ ಪಡೆಯಲು ಅರ್ಹರಾಗುತ್ತಾರೆ.
5. ಪಿಎಚ್.ಡಿ ಸಂಶೋಧನಾರ್ಥಿಯಾಗಿ ಪ್ರವೇಶ ಪಡೆಯಲು ಅಗತ್ಯವಿರುವ ಮಾಹಿತಿಗಾಗಿ ವೆಬ್‌ಸೈಟ್‌ನಲ್ಲಿರುವ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ರೆಗ್ಯೂಲೇಷನ್ಸ್ ಗಮನಿಸುವುದು.

**ಸಹಿ/–**

**ಕುಲಸಚಿವರು**